ಓ ಎಸ್ ನಂಃ **95/2011**
ಡಿ .ಡಬ್ಲ್ಯೂಃ **4,**ಶಕುಂತಲಾ

ದಿನಾಂಕ : **04.01.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಪಾಟಿ ಸವಾಲು :- ಶ್ರೀ ಜಿ ಎಸ್ ಎನ್ , **4** ಮತ್ತು **5** ನೇ ಪ್ರತಿವಾದಿ ಪರ ವಕೀಲರಿಂದ:

ನನ್ನ ವಯಸ್ಸು ತೋರಿಸಲು ಯಾವುದೇ ಕಾಗದ ಪತ್ರ ಹಾಕಿಲ್ಲಾ. ನಾನು ಸುಮಿತ್ತಾಬಾಯಿ ಇವರ ಮೊದಲನೇ ಮಗಳು, ಅವರಿಗೆ 4 ಜನ ಮಕ್ಕಳು. ಈ ಮೊದಲು 11 ನೇ ಪ್ರತಿವಾದಿ ಸುಮಿತ್ರಾಬಾಯಿ ಈ ಪ್ರಕರಣದಲ್ಲಿ ತಕರಾರು ಸಲ್ಲಿಸಿರಲಿಲ್ಲಾ. ದಾವಾ ಸ್ವತ್ತುಗಳ ಸ.ನಂ. ಮತ್ತು ವಿಸ್ತೀರ್ಣ ಹೇಳಲು ಆಗುವುದಿಲ್ಲಾ, ನಾನು ಶಾಲೆಗೆ ಹೋಗಿಲ್ಲಾ. ರಾಣೋಜಿರಾವ ಇವರನ್ನು ನಾನು ನೋಡಿರುತ್ತೇನೆ. ಅವರು ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲಾ. ಆ ಸಮಯದಲ್ಲಿ ನಾನು 4-5 ವರ್ಷ ವಯಸ್ಸನವಳು ಇದ್ದೆ, ರಾಣೋಜಿರಾವ ಇವರ ಇಬ್ಬರ ಹೆಂಡತಿಯರನ್ನು ನಾನು ನೋಡಿರುತ್ತೇನೆ. ಅವರಿಬ್ಬರ ಮದುವೆ ಯಾವಾಗ ಆಯಿತು ಎಂದು ತಾರೀಖು ಹೇಳಲು ಆಗುವುದಿಲ್ಲಾ. ರಾಣೋಜಿರಾವ ಇವರಿಗೆ ಇಬ್ಬರು ಹೆಂಡತಿಯರು ಇದ್ದ ಬಗ್ಗೆ ದಾಖಲೆ ಯಾವುದು ಹಾಕಿಲ್ಲಾ. ಸದರಿ ರಾಣೋಜಿರಾವ ಇವರಿಗೆ ಇಬ್ಬರು ಹೆಂಡತಿಯರು ಎಂದು ಸುಳ್ಳು ಹೇಳುತ್ತೆದ್ದೇನೆಂದರೆ ಸರಿಯಲ್ಲ. ವಾದಿ ಹೀರಬಾಯಿ ಇವರು ರಾಣೋಜಿಇವರ ಮೊದಲನೆ ಹೆಂಡತಿಯ ಮಗಳು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ಶಾರದಾಬಾಯಿ ಇವರು ೨ನೇ ಹೆಂಡತಿಯ ಮಗಳು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ .

ವಾದ ಪತ್ರದಲ್ಲಿ ಹಾಕಿರುವ ವಂಶವೃಕ್ಷ ವು ಸರಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ರಂಗಮ್ಮ ಮತ್ತು ಹಿರಕನಬಾಯಿ ರಾಣೋಜಿರಾವ ಇವರ ಹೆಂಡತಿಯರು ಅಲ್ಲಾ ಎಂದರೆ ಸರಿಯಲ್ಲ ಮತ್ತು ಅವರು ರಾಣೊಜಿರಾವ ಇವರ ಕುಟುಂಬಕ್ಕೆ ಸಂಬಂಧ ಇಲ್ಲಾ ಎನ್ನವುದು ಸರಿಯಲ್ಲ. 4 ನೇ ಪ್ರತಿವಾದಿ ಮಾತ್ರ ಕಾನೂನು ಬದ್ದ ವಾರಸುದಾರರು ಎಂದು ಹೇಳುವುದು ಸರಿಯಲ್ಲ. ರತ್ನಬಾಯಿ ಇವರಿಗೆ ಲಲಿತಾಬಾಯಿ ಮತ್ತು ರಾಮಣ್ಣ ಮಕ್ಕಳು ಎಂದರೆ ಇರಬಹದು ಎಂದು ಹೇಳುತ್ತಾರೆ. ರಾಣೋಜಿರಾವ ತೀರಿಕೊಂಡ ನಂತರ ರತ್ನಾಬಾಯಿ ಇವರು ಸದರಿ ಸ್ವತ್ತಿಗೆ ಮಾಲೀಕರು ಎಂದು ಘೋಷಣೆ ಮಾಡುವುಂತೆ ಭೂ ನ್ಯಾಯ ಮಂಡಳಿಗೆ ಅರ್ಜಿ ಕೊಟ್ಟಿದ್ದರು ಎಂದರೆ ಸಾಕ್ಷಿ ಅದು ಮೋಸ ದಿಂದ ಮಾಡಿದ್ದಾರೆ ಎಂದು ಹೇಳುತ್ತಾರೆ. ಆ ನ್ಯಾಯ ಮಂಡಳಿಯಲ್ಲಿ ರತ್ನಾಬಾಯಿ ರಾಣೋಜಿರಾವ ಇವರ ಹೆಂಡತಿ ಮತ್ತು ಲಲಿತಾಬಾಯಿ ಹಾಗೂ ಅಣ್ಣಾರಾವ ಅವರ ಮಕ್ಕಳು ಎಂದು ಆದೇಶ ಆಯಿತು ಎಂದರೆ ಸಾಕ್ಷಿ ಸುಳ್ಳು

ಎಂದು ಹೇಳುತ್ತಾರೆ. ಆದೇಶ ಪ್ರಕಾರ ಸ.ನಂ. 185, 62, 172, 174 ಈ ಸ್ವತ್ತುಗಳು ಅಣ್ಣಾರಾವ ಹೆಸರಿಗೆ ಆಯಿತು ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ಅದೇ ರೀತಿ. ಸ.ನಂ. 57,59,103, ರತ್ನಾಬಾಯಿಗೆ ಹೆಸರಿಗೆ ಆಯಿತು ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ಅದೇ ರೀತಿ. ಸ.ನಂ. 43,163 ಈ ಸ್ವತ್ತುಗಳು ಲಲಿತಾಬಾಯಿ ಹೆಸರಿಗೆ ಆಯಿತು ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ಅಲ್ಲಿಂದ ಇಲ್ಲಿಯರವರೆಗೂ ಅವರೇ ಮಾಲಿಕರು , ಕಬ್ಜೆದಾರರು ಎಂದರೆ ಸಾಕ್ಷಿ ಕಬ್ಜೆ ಎಲ್ಲಾ ಮೋಸದಿಂದ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ.

ಭೂ ನ್ಯಾಯ ಮಂಡಳಿ ಆದೇಶದ ವಿರುದ್ಧ ನಾವು ಯಾವುದೇ ಮೇಲನ್ಮವಿ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲಾ ಎಂದು ಹೇಳುತ್ತಾರೆ. ಓ ಎಸ್ 189/2002 ಪ್ರಕರಣದಲ್ಲಿ ವಾದಿ ಹೀರಬಾಯಿ ಪಾರ್ಟಿ ಇರಲಿಲ್ಲಾ ಎಂದು ಸುಳ್ಳ ಹೇಳಿದ್ದೇನೆ ಅಂದರೆ ಸರಿಯಲ್ಲ. ಅದೇ ರೀತಿ ಅವರಿಗೆ ಪಾರ್ಟಿ ಮಾಡದೇ ಮೋಸದಿಂದ ಮುಟೇಶನ ಆದೇಶ ಪಡೆದಿದ್ದಾರೆ ಎಂದು ಸುಳ್ಳು ಹೇಳಿ ಬರೆಸಿದ್ದೇನೆ ಅಂದರೆ ಸರಿಯಲ್ಲ . ಆ ಪ್ರಕರಣದಲ್ಲಿ ಹೀರಾಬಾಯಿ 9 ಪ್ರತಿವಾದಿ ಆಗಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲಾ ಎಂದು ಹೇಳುತ್ತಾರೆ. ಆ ಪ್ರಕರಣದಲ್ಲಿ ಅವರು ವಕೀಲರನ್ನು ನೇಮಿಸಿ ತಕರಾರು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲಾ ಎಂದು ಹೇಳುತ್ತಾರೆ. 4 ಮತ್ತು 5 ನೇ ಪ್ರತಿವಾದಿಗಳು ಕಾನೂನು ಬಾಹಿರವಾಗಿ ತಮ್ಮ ಹೆಸರಿಗೆ ಮುಟೇಶನ ಮಾಡಿಕೊಂಡಿದ್ದಾರೆ ಎಂದು ಸುಳ್ಳು ಹೇಳಿ ಬರೆಸಿದ್ದೇನೆ ಅಂದರೆ ಸರಿಯಲ್ಲ. 4 ಮತ್ತು 5 ನೇ ಪ್ರತಿವಾದಿಗಳಿಗೆ ಈ ದಾವಾ ಸ್ವತ್ತುಗಳ ಮೇಲೆ ಯಾವುದೇ ಹಕ್ಕು ಇಲ್ಲಾ ಎಂದು ಸುಳ್ಳು ಹೇಳಿ ಬರೆಸಿದ್ದೇನೆ ಅಂದರೆ ಸರಿಯಲ್ಲ. ಅವರಿಗೆ ಹಕ್ಕು ಇದುದ್ದರಿಂದ ಕುಟುಂಬದ ಅವಶ್ಯಕತೆಗಾಗಿ ಕೆಲವೊಂದು ಹೊಲಗಳನ್ನು ಮಾರಿದ್ದಾರೆ ಎಂದರೆ ಸಾಕ್ಷಿ ಮೋಸದಿಂದ ಮಾರಿದ್ದಾರೆ ಎಂದು ಹೇಳುತ್ತಾರೆ. ಸದರಿ ಖರಿದಿ ಪತ್ರ ಗಳು ಮೋಸದಿಂದ ಆಗಿದ್ದು, ಅವುಗಳನ್ನು ರದ್ದು ಪಡಿಸಿಬೇಕೆಂದು ಸುಳ್ಳು ಹೇಳಿ ಬರೆಸಿದ್ದೇನೆ ಅಂದರೆ ಸರಿಯಲ್ಲ.

ಹೀರಾಬಾಯಿ ಇವರು ಶಿವಾಜಿ ಮತ್ತು ಅವರ ಮಗಳ ಹೆಸರಿಗೆ ವಿಲ್ ಮಾಡಿದ್ದಾರೆ ಎಂದು ಹೇಳಿದ್ದು, ಅದು ಸೃಷ್ಟಿಸಿದ ವಿಲ್ ಎಂದರೆ ಸರಿಯಲ್ಲ. ನನ್ನ ತಾಯಿಯ ಅಕ್ಕ ತಂಗಿಯರ ಜೊತೆ ನನಗೂ ಸಹ ಪಾಲು ಬರಬೇಕು ಎಂದು ಸುಳ್ಳು ಹೇಳಿ ಬರೆಸಿದ್ದೇನೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಮ್ಮ ಮನೆಯಲ್ಲಿ ವಾಸ ಇದ್ದು, ಅಲ್ಲೇ ತೀರಿಕೊಂಡರು ಎಂದು ಸುಳ್ಳು ಹೇಳಿ ಬರೆಸಿದ್ದನೆ ಅಂದರೆ ಸರಿಲ್ಲ. ಅವರು ಎಲ್ಲಾ ಹೆಣ್ಣು ಮಕ್ಕಳ ಮನೆಗೆ ಹೋಗಿ ಬಂದು ಮಾಡುತಿದ್ದರು ಎಂದರೆ ಸಾಕ್ಷಿ ಇಲ್ಲಾ ನಮ್ಮ ಮನೆಯಲ್ಲೇ ಇದ್ದರು ಎಂದು ಹೇಳುತ್ತಾರೆ. ಕೇಸಿಗೆ ಸಹಾಕಾರಿಯಾಗಿಲಿ ಎಂದು ಅವರನ್ನ

**ಓ ಎಸ್ ನಂಃ 95/2011**
**ಡಿ .ಡಬ್ಲ್ಯೂಃ 4,ಶಕುಂತಲಾ**

ನಾವು ಜಬರದಸ್ತಿ ಮಾಡಿ ನಮ್ಮ ಮನೆಗೆ ಕರೆದು ತಂದಿದ್ದೇವು ಈ ವಿಚಾರವಾಗಿ ಪೋಲಿಸ ಕೇಸ ಆಗಿತ್ತು ಎಂದರೆ ಸಾಕ್ಷಿ ಇಲ್ಲಾ ಅದು ಸುಳ್ಳು ಎಂದು ಹೇಳುತ್ತಾರೆ. ನನಗೆ ಈ ಪ್ರಕರಣದ ಬಗ್ಗೆ ವೈಯಕ್ತಿಕ ವಾದ ಮಾಹಿತಿ ಇಲ್ಲಾ ಎನುವುದು ಸರಿಯಲ್ಲ. ನನ್ನ ಗಂಡ ಮುಕ್ತಿಯಾರ ಪತ್ರ ಸೃಷ್ಟಿಸಿಕೊಟ್ಟು ನನ್ನ ಮೂಲಕ ಸುಳ್ಳು ಸಾಕ್ಷಿ ಹೇಳಿಸಿದ್ದರೆ ಎಂದರ ಸರಿಯಲ್ಲ ನನ್ನ ಗಂಡನಿಗೆ ಸಹಾಯ ಆಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಶಾರಾದಬಾಯಿ ಇವರು ಸ.ನ. 172 ಅವರ ಹೆಸರಿಗೆ ಮಾಡಿಸಲು ಅರ್ಜಿ ಕೊಟ್ಟಿರುತ್ತಾರೆ ಎಂದರೆ ಆ ವಿಚಾರ ನನಗೆ ಗೊತ್ತಿಲ್ಲಾ ಎಂದು ಹೇಳುತ್ತಾರೆ. ಸದರಿ ಅರ್ಜಿಗೆ ನನ್ನ ಗಂಡ ಶಿವಾಜಿ ತಕರಾರು ಕೊಟ್ಟಿದಾರೆ ಎಂದರೆ ಅದು ನನಗೆ ಗೊತ್ತಿಲ್ಲಾ ಎಂದು ಹೇಳುತ್ತಾರೆ ಆ ಅರ್ಜಿ ಮತ್ತು ತಕರಾರನ್ನು ಇಬ್ಬರು ಮಿಲಾಫೆಯಾಗಿ ಹಾಕಿದ್ದರು ಎಂದರೆ ಸುಳ್ಳು ಎಂದು ಹೇಳುತ್ತಾರೆ. ಆ ಅರ್ಜಿ ಮೇಲೆ ಮುಟೇಶನ ಆದ ಬಗ್ಗೆ ನನಗೆ ಗೊತ್ತಿಲ್ಲಾ. ನಾನು ಹಾಕಿರುವ ಕಾಗದ ಪತ್ರಗಳು ಎಲ್ಲಾ ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.